ಓ.ಎಸ್.ನಂ.*28/2016*

*ಪಿ.ಡಬ್ಲ್ಯೂ- 2*

***ದಿಃ 20-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಪಿ ಆರ್ ವಕೀಲರಿಂದ***

ವಾದಿ ಮತ್ತು ಪ್ರತಿವಾದಿಗಳ ತಂದೆಯರು ಅಣ್ಣ ತಮ್ಮಂದಿರು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳು ಸುಮಾರು *40* ವರ್ಷಗಳ ಹಿಂದೆ ತಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆಂದು ನೀವು ಹೇಳಿದ್ದೀರಿ ಸದರಿ ವಿಭಾಗ ಪತ್ರವನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ವಾದಿಯ ತಂದೆ ಮತ್ತು ಪ್ರತಿವಾದಿಯ ನಡುವೆ *1985*ನೇ ಸಾಲಿನಲ್ಲಿ ವಿಭಾಗ ಆಗಿದೆ ಎಂದರೆ ಸಾಕ್ಷಿಯು ಆಗಿರಬಹುದು ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ವಿಭಾಗ ಪತ್ರವನ್ನು ಮಾಡಿಕೊಳ್ಳುವ ಕಾಲಕ್ಕೆ ಪ್ರತಿವಾದಿಯ ತಂದೆ ಬದುಕಿದ್ದರೂ ಇಲ್ಲವೂ ಎಂಬ ವಿಚಾರ ತಮಗೆ ಗೊತ್ತಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆ ಸುಮಾರು *60* ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆಂದರೆ ಸಾಕ್ಷಿಯು ಇನ್ನು ಹಿಂದೆ ಮರಣ ಹೊಂದಿದ್ದಾರೆಂದು ನುಡಿಯುತ್ತಾರೆ. ದಾವ ಆಸ್ತಿಯು ಶಾಂತಪ್ಪನವರಿಗೆ ಯಾವುದರ ಮುಖಾಂತರ ಬಂದಿದೆ ಎಂದು ನನಗೆ ಗೊತ್ತಿಲ್ಲ. ದಾವ ಆಸ್ತಿಯ ಸರ್ವೆ ನಂ.*92.* ಯಾವ ಯಾವ ಆಸ್ತಿಗಳಿಗೆ ಸಂಬಂಧಪಟ್ಟಂತೆ ವಾದಿಯು ದಾವೆಯನ್ನು ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ವಾದಿಯು ಈ ದಾವೆಯಲ್ಲಿ ಯಾವ ಪರಿಹಾರವನ್ನು ಕೇಳಿದ್ದಾರೆಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***